# ಕುವೆಂಪು ವಿಶ್ವವಿದ್ಯಾಲಯ

**ಕುಲಸಚಿವ(ಪರೀಕ್ಷಾಂಗ)ರವರ ಕಛೇರಿ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ – 577451**

**ದೂರವಾಣಿ ಸಂಖ್ಯೆ: 08282–256166: ಫ್ಯಾಕ್ಸ್ ಸಂಖ್ಯೆ :08282–257516**


ಆದೇಶ ಸಂಖ್ಯೆ:ಕುವಿ:ಪವಿ:ಹೆಚ್ಆರ್–1:2046:2026–27: ದಿನಾಂಕ:07–07–2026

## ಸುತ್ತೋಲೆ

**ವಿಷಯ:** ವಿಶ್ವವಿದ್ಯಾಲಯದಲ್ಲಿ ಏಕರೂಪ ಪರೀಕ್ಷಾ ಭತ್ಯೆ/ಸಂಭಾವನೆಗಳನ್ನು ಅಳವಡಿಸಿಕೊಂಡಿರುವ ಕುರಿತು.

**ಉಲ್ಲೇಖ:** ಈ ಕಛೇರಿ ಆದೇಶ ಸಂಖ್ಯೆ:ಕುವಿ:ಪವಿ:ಹೆಚ್ಆರ್–1:884: 2025–26:ದಿ:20–05–2025.

****

ಸರ್ಕಾರದ ಅಧೀನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿ–2) ಕರ್ನಾಟಕ ಸರ್ಕಾರ ಬೆಂಗಳೂರು – ಇವರು ಆದೇಶ ಹೊರಡಿಸಿ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ವ್ಯಾಪ್ತಿಗೊಳಪಡುವ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರಡಿ ನಿಯಂತ್ರಿಸಲ್ಪಡುವ ಸಂಯೋಜನೆಗೊಳಿಸುವ ಏಕಾತ್ಮಕ ವಿಶ್ವವಿದ್ಯಾಲಯಗಳ ಸೇರಿ ಏಕರೂಪದ ಪರೀಕ್ಷಾ ಸಂಭಾವನೆಯ ಆದೇಶವನ್ನು ಅಳವಡಿಸಿಕೊಳ್ಳಲು ಸುತ್ತೋಲೆಯನ್ನು ಹೊರಡಿಸಿರುತ್ತದೆ. ಅದರಂತೆ ವಿಶ್ವವಿದ್ಯಾಲಯದಲ್ಲಿ ಏಕರೂಪದ ಪರೀಕ್ಷಾ ಭತ್ಯೆ/ಸಂಭಾವನೆಯ ಆದೇಶವನ್ನು ಉಲ್ಲೇಖಿತದಲ್ಲಿ ಅಳವಡಿಸಿಕೊಳ್ಳಲಾಗಿರುತ್ತದೆ.

ಸರ್ಕಾರದ ಏಕರೂಪದ ಪರೀಕ್ಷಾ ಭತ್ಯೆ/ಸಂಭಾವನೆಯ ಆದೇಶದಲ್ಲಿ ಪಿಹೆಚ್.ಡಿ., ಮಹಾ ಪ್ರಬಂಧ ಮೌಲ್ಯಮಾಪನ (ಬಾಹ್ಯ) ಪ್ರಾಧ್ಯಾಪಕರುಗಳಿಗೆ ಮಾತ್ರ ಸಂಭಾವನೆಯನ್ನು ನಿಗದಿಪಡಿಸಿ, ಆಂತರಿಕ ಮೌಲ್ಯಮಾಪಕರಿಗೆ ಯಾವುದೇ ಭತ್ಯೆ/ಸಂಭಾವನೆ ನಿಗದಿಪಡಿಸಿರುವುದಿಲ್ಲ. ಪರೀಕ್ಷಾ ಮಂಡಳಿ ಅಧ್ಯಕ್ಷರಿಗೆ ಮಾತ್ರ ರೂ.2000–00 (ರೂಪಾಯಿ ಎರಡು ಸಾವಿರ)ಗಳು ಮತ್ತು ರೂ.500–00 (ರೂಪಾಯಿ ಐದು ನೂರು)ಗಳ ಸಾಧಿಲ್ವಾರು ವೆಚ್ಚವಿರುತ್ತದೆ. ಈ ಹಿನ್ನೆಲೆಯಲ್ಲಿ ಸರ್ಕಾರದ ಏಕರೂಪದ ಪರೀಕ್ಷಾ ಭತ್ಯೆ/ಸಂಭಾವನೆಯ ಆದೇಶದಂತೆ ಪಿಹೆಚ್.ಡಿ., ಮಾರ್ಗದರ್ಶಕರುಗಳು ಮಹಾ ಪ್ರಬಂಧ ಮೌಲ್ಯಮಾಪನಕ್ಕೆ ಯಾವುದೇ ಸಂಭಾವನೆ ಇರುವುದಿಲ್ಲವಾದ್ದರಿಂದ ಭತ್ಯೆ/ಸಂಭಾವನೆ ಹುಂಡಿಯನ್ನು ಸಲ್ಲಿಸಬಾರದೆಂದು ಈ ಮೂಲಕ ತಿಳಿಸಲಾಗಿದೆ.

R. [signature] 10/07/26

ಕುಲಸಚಿವರು(ಮೌಲ್ಯಮಾಪನ)
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ, ಶಂಕರಘಟ್ಟ-577 451

**ಗೆ,**

ಎಲ್ಲಾ ಸ್ನಾತಕೋತ್ತರ ವಿಭಾಗಗಳ ಅಧ್ಯಕ್ಷರು/ಪಿಹೆಚ್.ಡಿ., ಮಾರ್ಗದರ್ಶಕರು, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ/ಶಿವಮೊಗ್ಗ ಜಿಲ್ಲೆ/ಚಿಕ್ಕಮಗಳೂರು ಜಿಲ್ಲೆ.

ಪ್ರತಿಗಳು:

1. ಆಪ್ತ ಸಹಾಯಕರು, ಕುಲಪತಿಗಳು/ಕುಲಸಚಿವರು/ಕುಲಸಚಿವರು(ಪರೀಕ್ಷಾಂಗ) ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ.
2. ಉಪಕುಲಸಚಿವರು/ಸಹಾಯಕ ಕುಲಸಚಿವರು/ಶಾಖಾಧಿಕಾರಿಗಳು, ಪರೀಕ್ಷಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ.
3. ಕಂಪ್ಯೂಟರ್ ವಿಭಾಗ – ಸುತ್ತೋಲೆಯನ್ನು ವಿಶ್ವವಿದ್ಯಾಲಯದ ಅಧಿಕೃತ ಜಾಲತಾಣದಲ್ಲಿ ಪ್ರಕಟಿಸಲು ತಿಳಿಸಿದೆ.
4. ಕಛೇರಿ ಪ್ರತಿ.